ಹುದ್ದೆಯಲ್ಲಿ ಇದ್ದೇನೆ' ಎನ್ನುತ್ತಿದ್ದಳು. ಆದರೆ 'ಅಪ್ಪಾ ಸ್ವಲ್ಪ ಹಣ ಬೇಕಾಗಿದೆ' ಎಂದು ಆಗಾಗ ಕೇಳುತ್ತಲೇ ಇದ್ದಳು. 'ಎಷ್ಟು ಬೇಕು?' ಎಂದು ಕೇಳಿದರೆ ಲಕ್ಷಕ್ಕೆ ಹತ್ತಿರದ ಅಥವಾ ಸ್ವಲ್ಪ ಹೆಚ್ಚಾದ ಒಂದು ಮೊತ್ತ ಹೇಳುತ್ತಿದ್ದಳು.

ಸುಕೃತಿಯ ಗಂಡ ಕರುಣಾನಿಧಿ ಸುಕೃತಿಯ ಸಂಬಳದಿಂದ ಒಂದಷ್ಟು ತೆಗೆದುಕೊಳ್ಳುತ್ತಿದ್ದ. ಸುಕೃತಿಯ ಬಳಿ ಹಣವಿಲ್ಲದಾದಾಗ 'ಅಪ್ಪಾ ಸ್ವಲ್ಪ ಹಣ ಬೇಕಾಗಿದೆ' ಎಂದು ಯಾವ ಸಂಕೋಚ ನಾಚಿಕೆಯೂ ಇಲ್ಲದೆ ಕೇಳುತ್ತಿದ್ದಳು. ಕರುಣಾನಿಧಿಯ ಬಗ್ಗೆ ನರಹರಿ ಯಾವ ಪ್ರಶ್ನೆಯನ್ನೂ ಕೇಳುವುದಿಲ್ಲ. ಅಭಿ ಹೇಳಿದ್ದರಿಂದ 'ಕರುಣಾನಿಧಿ' ಎಂಬ ಶಬ್ದ ಮಾತ್ರ ಗೊತ್ತಿತ್ತು. ಅದು ನರಹರಿಗೆ ಒಂದು ಹೆಸರು ಕೂಡ ಆಗಿರದೆ ಒಂದು ಶಬ್ದ ಮಾತ್ರ ಆಗಿತ್ತು. ತಮ್ಮಿಬ್ಬರ ಫೋಟೊವನ್ನಾಗಲಿ, ಮದುವೆಯ ಫೋಟೊವನ್ನಾಗಲಿ ಸುಕೃತಿ ಕಳಿಸಿರಲಿಲ್ಲ. ನರಹರಿಯಾಗಲಿ, ಅಭಿಯಾಗಲಿ 'ಫೋಟೊ ಕಳಿಸು' ಎಂದಿರಲಿಲ್ಲ. ಯಾವ ಪ್ರಶ್ನೆಯನ್ನೂ ಕೇಳದೆ ನರಹರಿ ಹಣ ಮಾತ್ರ ಕಳಿಸಿ ಬಿಡುತ್ತಿದ್ದ. ಪ್ರೀತಿಯೋ ಮೋಹವೋ ಕರುಣೆಯೋ ಯಾವ ಭಾವದಿಂದ ಅವಳು ಕೇಳಿದ ಮೊತ್ತವನ್ನು ಕಳಿಸುತ್ತಿದ್ದೇನೆ ಎಂದು ನರಹರಿಗೇ ತಿಳಿದಿರಲಿಲ್ಲ. ನನ್ನ ಮಗಳಾಗಿರುವ ಸುಕೃತಿಯ ದೃಷ್ಟಿಯಲ್ಲಿ ನಿಜವಾಗಿ ಈ ನರಹರಿ ಯಾರು? ಎಂಬ ಪ್ರಶ್ನೆ ಒಮ್ಮೊಮ್ಮೆ ಅವನಲ್ಲಿ ಮೂಡುವುದಿತ್ತು. ಆ ಪ್ರಶ್ನೆ ಕಾಣಿಸಿಕೊಂಡಾಗ ತಟ್ಟನೆ ಅವನ ಕಣ್ಣುಗಳಿಂದ ನೀರಿಳಿಯುತ್ತಿತ್ತು. ಆಗ, ಇದು ಎಂಥ ನೀರು? ಎಂಬ ಪ್ರಶ್ನೆಯ ಜೊತೆ ಎಂಥ ನಗು ಎನ್ನಲಾಗದಂಥ ನಗು ಆನೆಮಹಲಿನ ಮರಗಳಡಿಯಲ್ಲಿ ನಡೆಯುವಾಗ ಅಚಾನಕಾಗಿ ರುಂಡ ಮುಂಡಕ್ಕೆ ಅಂಟಿಕೊಳ್ಳುವ ಜೇಡರ ಬಲೆಯಂತೆ ಅವನ ಮುಖದಲ್ಲಿ ಕಾಣಿಸಿಕೊಂಡು ಹರಿದು ಹಂಚಿ ಮಾಯವಾಗುತ್ತಿತ್ತು.

ನರಹರಿಯ ಮನಸ್ಸಿನಲ್ಲಿ ಆಗಾಗ, ಈ ಕಾಲದ ಹುಡುಗ ಹುಡುಗರೇಕೆ ಹೀಗೆ, ಇವರು ತಮ್ಮ ಬದುಕನ್ನು ಏನೆಂದು ಭಾವಿಸಿಕೊಂಡಿರುತ್ತಾರೆ, ಹೇಗೆ ಜೀವಿಸುತ್ತಿದ್ದೇವೆ ಎಂಬ ಯೋಚನೆ ಇವರಿಗೆ ಇಲ್ಲವೆ, ಸಂಬಂಧ ಎಂಬ ಭಾವನೆಯೇ ಈಗೀಗ ಮನುಷ್ಯನ ಹೃದಯದಿಂದ ಮಾಯವಾಗುತ್ತಿದೆಯೆ, ಮನುಷ್ಯನ ಮನಸ್ಸು ಮತ್ತು ಜೀವಿಸುವ ರೀತಿ ಮೃಗ ಪಕ್ಷಿಗಳ ಜೀವನ ಮತ್ತು ಜೀವಿಸುವ ರೀತಿಯಂತೆಯೇ ಆಗಿದೆಯೆ, ದುಃಖದ ಮತ್ತು ಸಂತೋಷದ ಕಣ್ಣೀರು ಮೃಗ ಪಕ್ಷಿಗಳಿಗಿಲ್ಲ; ಮನುಷ್ಯನಿಗೆ ಇದೆ. ಆದರೆ ಈಗ ಸಂಬಂಧ ಎನ್ನುವುದು ಕರಕರಗಿ ಮಾಯವಾಗುತ್ತಿದೆಯೆ, ಸಂತೋಷದ ಮತ್ತು ದುಃಖದ ಕಣ್ಣೀರು ಈಗ ಯಾರ ಕಣ್ಣಲ್ಲೂ ಇಲ್ಲವೇನೊ, ಇನ್ನೊಬ್ಬರ, ಮುಖ್ಯವಾಗಿ ತಮ್ಮನ್ನು ಹೆತ್ತು ಸಾಕಿ ಸಲಹಿದವರ, ಜಾರಿ ಬಿದ್ದು ಎಲುಬು ತುಂಡಾದಾಗ ಎತ್ತಿ ಆಸ್ಪತ್ರೆಗೆ ಒಯ್ದ ಅಪರಿಚಿತರ, ಎಲ್ಲಕ್ಕಿಂತ ಮುಖ್ಯವಾಗಿ, ಹಸಿದಾಗ ತುತ್ತು ಇತ್ತವರ ನೆನಪು ಆಗುವುದೇ ಇಲ್ಲವೆ? ಹೀಗೆ ನೂರಾರು ಪ್ರಶ್ನೆಗಳು ನರಹರಿಯ ಮನಸ್ಸಿನಲ್ಲಿ ಮೂಡಿ ಮಾಯವಾಗುತ್ತಾ ಇರುತ್ತವೆ. ಅದರ ನಡುವೆ, ಇವರೊಡನೆ, ತಾನು ಹೇಗೆ ಇರಬೇಕು, ಇರಬೇಕೆ ಬೇಡವೆ, ಎಲ್ಲವನ್ನೂ ತೊರೆಯಬೇಕೆ, ತೊರೆಯುವುದಾದರೂ ಹೇಗೆ ಎಂಬ ಪ್ರಶ್ನೆಗಳು ಪುನಃ ಪುನಃ ಪುಟಿದೇಳುತ್ತಲೇ ಇರುತ್ತವೆ. ಪ್ರಶ್ನೆಗಳನ್ನು ನರಹರಿ ಮೂಟೆ ಕಟ್ಟಿಡುವುದಿಲ್ಲ. ಪ್ರಕಾಶರಹಿತ ನಕ್ಷತ್ರಗಳಂತೆ ಅವನ ಮನಸ್ಸಿನ ಆಕಾಶದಲ್ಲಿ ಸುತ್ತುತ್ತಲೇ ಇರುತ್ತವೆ. ಅವುಗಳನ್ನು ದೂರಕ್ಕಟ್ಟಲಾಗದೆ, ಇದಕ್ಕೆಲ್ಲ ತನಗೆ ಎಲ್ಲಿ ಯಾವಾಗ ಉತ್ತರ ಸಿಗುತ್ತದೆ, ಎಂಬ ನಾಲ್ಕೈದು ಪ್ರಶ್ನೆಗಳ ಒಂದು ಸಿಂಬಿಯಲ್ಲಿ ಸುತ್ತಿ ಮನದ ಮೂಲೆಗೆಸೆದು, ಮೌನವೇ ಅತ್ಯುತ್ತಮವಾದ ಭಾಷೆ, ಧ್ಯಾನವೇ ಪರಂಧಾಮ ಎಂಬಂತೆ ಇರುತ್ತಾನೆ ನರಹರಿ. ಕೆಲವೊಮ್ಮೆ, ಬದುಕಿನಲ್ಲಿ ಏನೂ ಇಲ್ಲವೆನಿಸಿ, ಎದ್ದು ಎತ್ತಲಾದರೂ ಅಂತವಿಲ್ಲದ ದಿಗಂತದ ಕಡೆಗೆ ನಡೆದುಬಿಡೋಣ ಎಂದನಿಸುತ್ತದೆ.

ಶಾಲ್ಮಲಿ ಆರೋಗ್ಯ ಸುಧಾರಣೆ

ಶಾಲ್ಮಲಿಯ ಆರೋಗ್ಯದಲ್ಲಿ ಸುಧಾರಣೆಯಾಗಿ ಎದ್ದು ಓಡಾಡುವಂತಾದಾಗ ಅವಳ ಅಪ್ಪ ಅಮ್ಮ ಕರೆದುಕೊಂಡು ಹೋಗಲು ಬಂದರು. ಶಾಲ್ಮಲಿ ಮತ್ತು ಅವರ ಸಮಕ್ಷಮ ನರಹರಿ ಹೇಳಿದ, 'ಅಭಿ ಅವನ ಕೆಲಸವನ್ನೆಲ್ಲ ಅರ್ಧದಲ್ಲಿ ಬಿಟ್ಟು ಬಂದಿದ್ದಾನೆ. ಆದ್ದರಿಂದ ಇನ್ನೆರಡು ದಿನಗಳಲ್ಲಿ ಅಮೆರಿಕೆಗೆ ಹೋಗುತ್ತಾನೆ. ಅವನು ಅದೇ ಕೆಲಸದಲ್ಲಿ ಇನ್ನೂ ಕೆಲವು ವರ್ಷ ಇರುತ್ತೇನೆ ಅಂತ ಹೇಳುತ್ತಿದ್ದಾನೆ. ನಾನು ಕೂಡ ಕೆಲಸಗಳನ್ನೆಲ್ಲ ಅರ್ಧದಲ್ಲಿ ಬಿಟ್ಟು ಬಂದಿದ್ದೇನೆ. ಆದರೆ ನಾನು ಅದನ್ನು ಪೂರ್ತಿ ಮಾಡಿ ಒಂದು ವರ್ಷದಲ್ಲಿ ಮರಳಿ ಬರುತ್ತೇನೆ. ಅನಂತರ ನಾನು ಎಲ್ಲಿಗೂ ಹೋಗುವುದಿಲ್ಲ' ನರಹರಿಯೆಂದ.

'ಅಭಿ ಬರುವುದಿಲ್ಲವೆ?' ಎಂಬ ಶಾಲ್ಮಲಿಯ ತಂದೆ ಜಯವಂತ ಕೇಳಿದ ಪ್ರಶ್ನೆಗೆ ನರಹರಿ, 'ಬರ್ತಾನೆ, ಯಾವಾಗ ಎಂಬ ನಿರ್ಧಾರ ಅವನಿಗೇ ಬಿಟ್ಟದ್ದು'

'ಸುಕೃತಿ?' ಶಾಲ್ಮಲಿಯ ತಾಯಿ ಗೌರಿಯ ಪ್ರಶ್ನೆ.

'ಅವಳ ಬಗ್ಗೆ ಸದ್ಯಕ್ಕೆ ನನಗೆ ಏನೂ ಗೊತ್ತಿಲ್ಲ. ಅಭಿಗೆ ಗೊತ್ತಿರಬಹುದು. ಅಭಿ ಬಂದಾಗ ಕೇಳೋಣ' ಎಂದ ನರಹರಿ.

'ಸುಕೃತಿ ಮತ್ತು ಅಭಿಯ ಮದುವೆ ಯಾವಾಗ?' ಶಾಲ್ಮಲಿಯ ತಾಯಿ ಕೇಳಿದಳು.

'ಆ ಬಗ್ಗೆ ಅವರಲ್ಲಿ ನಾನು ಕೇಳಿದರೂ ಉತ್ತರ ಸಿಗುವುದಿಲ್ಲ, ನೀವು ಕೇಳಿದರೂ ಸಿಗುವುದಿಲ್ಲ. ಈ ಶತಮಾನದ ಮಕ್ಕಳು ಹೀಗೇ. ನಾವು ಹತ್ತು ಹೆಜ್ಜೆ ಮುಂದೆ ಹೋಗುವಾಗ ಅವರು ಅದಕ್ಕಿಂತ ಹತ್ತು ಹೆಜ್ಜೆ ಮುಂದೆ ಹೋಗಿರುತ್ತಾರೆ. ಅವರ ಬದುಕನ್ನು ಅವರೇ ಕಟ್ಟಿಕೊಳ್ಳುತ್ತಾರೆ. ಮದುವೆ ಬದುಕಿಗೆ ಸಂಬಂಧಿಸಿದ ಒಂದು ಕರ್ಮ. ಮನೆ ಬದುಕಿಗೆ ಸಂಬಂಧಿಸಿದ ಇನ್ನೊಂದು ಕರ್ಮ. ಎಲ್ಲವನ್ನೂ ಹೇಗೆ ಏನು ಎಂಥದು ಎಂದು ಅವರೇ ನಿರ್ಧರಿಸುತ್ತಾರೆ'

'ಒಟ್ಟಿನಲ್ಲಿ ಅವರು ಚೆನ್ನಾಗಿರಬೇಕು; ನಮಗೂ ಶಾಂತಿ ಸಮಾಧಾನ ಬೇಕು, ಅಲ್ವಾ?'ಶಾಲ್ಮಲಿಯ ತಂದೆ ಜಯವಂತನೆಂದ.

'ನಿಜ. ಅದು ನಮ್ಮ ಬಯಕೆ ಅಷ್ಟೆ; ಆದರೆ ಹೇಗಿರುತ್ತದೆ ಎಂದು ಕಾಲವೇ ಹೇಳಬೇಕು' ನರಹರಿಯೆಂದ.

ನರಹರಿ ಮತ್ತು ಅಭಿ ಜೊತೆಯಾಗಿಯೇ ಅಮೆರಿಕೆಗೆ ಬಂದರು. ವಿಮಾನ ಹತ್ತಿದ ಹೊತ್ತಿನಿಂದ ಇಳಿಯುವ ವರೆಗೆ ಅಪ್ಪ ಮಗ ಹತ್ತು ಹಲವು ವಿಷಯಗಳನ್ನು ಚರ್ಚಿಸಿದರು. ಇದು ತನಗೆ ದೊರೆತ ಅಪೂರ್ವ ಭಾಗ್ಯ ಎಂದನಿಸಿತು ಅಭಿಗೆ. 'ಅಪ್ಪ ನನ್ನಂತೆ ಒಬ್ಬ ಬರೀ ಇಂಜಿನಿಯರ್ ಅಲ್ಲ, ಅಪ್ಪ ಒಂದು ಅನುಭವ ನಿಧಿ ಮತ್ತು ಜ್ಞಾನ ನಿಧಿ, ಅಪ್ಪ ಎಲ್ಲೇ ಇರಲಿ ಅವನ ಜೊತೆ ನಾನಿರಬೇಕು, ಅಥವಾ ನಾನು ಎಲ್ಲೇ ಇರಲಿ ನನ್ನ ಜೊತೆ ಅಪ್ಪನಿರಬೇಕು' ಎಂದಿತು ಅಭಿಯ ಹೃದಯ.

ಅಮೆರಿಕೆಯಲ್ಲಿ ಅವರು ಮೊದಲು ಇದ್ದ ವಾಸ ಮುಂದುವರಿಯಿತು. ಮನೆಗೆಲಸಕ್ಕೆ ಆಳು ಸಿಗುವುದು ಸುಲಭವಾಗಿರಲಿಲ್ಲವಾದುದರಿಂದ ತಂದೆ ಮತ್ತು ಮಗ ಅಡುಗೆಯಿಂದ ತೊಡಗಿ, ಶಾಪಿಂಗ್ ಮುಂತಾಗಿ ಮನುಷ್ಯ ಮಾಡುವ ಎಲ್ಲಾ ಕೆಲಸಗಳನ್ನೂ ಪರಸ್ಪರ ಹಂಚಿಕೊಂಡು ಮಾಡುತ್ತಿದ್ದರು. ಪಾತ್ರೆ ತೊಳೆಯುವುದು, ಬಟ್ಟೆ ತೊಳೆಯುವುದು ಯಂತ್ರದ ಕೆಲಸವಾಗಿತ್ತು. ಒಮ್ಮೆ ತಯಾರಿಸಿದ ಅಡುಗೆಯನ್ನು ನಾಲ್ಕೈದು ದಿನ ಫ್ರಿಜ್ಜಿನಲ್ಲಿಟ್ಟುಕೊಂಡು ತಿನ್ನುವ ಅಮೆರಿಕೆಯ ರೂಢಿಗತ ಬದುಕಂತೂ ಮೊದಲೇ ಅಭ್ಯಾಸವಾಗಿತ್ತು. ಕೆಲಸ ಮುಗಿಸಿ ಬಂದ ನಂತರದ ವಿರಾಮದಲ್ಲಿ ಸ್ವಲ್ಪ ಟೀವಿ ವೀಕ್ಷಣೆ, ಸ್ವಲ್ಪ ಪತ್ರಿಕೆ, ಪುಸ್ತಕ ವಾಚನ ಅದಷ್ಟೇ ಬದುಕಿನ ಇತರ ಕ್ರಿಯೆಯಾಗಿತ್ತು.

ಒಂದು ದಿನ ಕಾಲಿಂಗ್ ಬೆಲ್‌ನ ಶಬ್ದಕ್ಕೆ ನರಹರಿ ಬಾಗಿಲು ತೆರೆದಾಗ 'ನಮಸ್ತೆ ಸರ್' ಎಂದು ಕೈ ಜೋಡಿಸಿ ನಿಂತ ಸನ್ಮತಿ ಕಾಣಿಸಿದಳು.

'ಯಾವಾಗ ಬಂದ್ರಿ ಸರ್?' ಸನ್ಮತಿ ಕೇಳಿದಳು.

'ಒಂದು ತಿಂಗಳಾಯಿತು'

'ಮ್ಯಾಡಮ್ ಬಂದಿಲ್ವ?'

## ಒಡವೆ

ಅವಳೆಂದಳು  
ಮುಂದೆ ಹೇಗೋ ಏನೋ  
ಈಗಲೇ ಮಾಡಿಸಿಬಿಡಿ  
ಒಡವೆ  
ನಾನೆಂದೆ  
ಮುಂದೆ ಹೇಗೋ ಏನೋ  
ಆಗಿಬಿಡಲೇ ಇನ್ನೊಂದು  
ಮದುವೆ!

★ ಆರ್. ಸುನೀಲ್ ತರೀಕೆರೆ



ಈಶ್ವರ